ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Friday, the 25th March 1977/Chaitra 4, 1899 S.E.

The House met in the Assembly Chamber, Vidhana Soudha at three of the Clock.

[MADAM SPEAKER (SMT. K. S. NAGARATHNAMMA) in the Chair.]

(SPEAKER'S REPORT)

MADAM SPEAKER.– I lay on the table of the House a copy of the address delivered by the Governor today.

GOVERNOR'S ADDRESS

HONOURABLE MEMBERS OF THE LEGISLATURE,

It gives me great pleasure to welcome you to this session of the State Legislature.

You have just returned from the election field and have been able to renew, in the fullest sense, your contact with the people. You have come, full of awareness of their many difficulties and problems to deliberate on what has been done, and on what has yet to be done by my Government to alleviate their difficulties.

The economic gains of the last year continue to be obvious, and the economy has regained its buoyant tone. My Government continues to be fully committed to the implementation of the 25-point economic programme which is aimed at both increasing our national income and at the same time distributing it

more evenly among all sections of our society. Progress in respect of the implementation of this programme has been quite spectacular during the last year.

Prices in Karnataka, of foodgrains and essential commodities registered a downward trend during the current year. There has been a rise in the prices of edible oil, and this is being remedied by imports. The year has unfortunately been one of scarcity in many parts of the State. My Government has declared 117 taluks in the State as scarcity-affected and has incurred an expenditure of about Rupees sixteen crores as on to-day on scarcity relief works in these taluks. Taking into account the normal Plan expenditure, the total amount spent in these scarcity-affected taluks comes to about Rupees Thirty-nine crores. We have had to waive the foodgrains levy in areas other than irrigated tracts in the drought-affected taluks. We have also had to pump in money to finance primary land development banks which were unable to reach the minimum levels of recovery required to enable them to continue lending operations to the agriculturists.

Our foodgrain buffer stocks continue to be satisfactory, despite the adverse scarcity conditions and the waiving of the levy operations in non-irrigated tracts in the drought-affected areas. We have decided to extend informal rationing to 11 more municipalities,

thus ensuring that all towns and cities having a population of more than 40,000 are covered. The supply of foodgrains and sugar to consumers through the public distribution system has been quite satisfactory. There are 15,952 fair price shops functioning in the State covering the entire population; of these, 12,046 are in the rural areas. The State Food and Civil Supplies Corporation continues its dual function of buying paddy, jowar and ragi, to provide the Government with adequate buffer stocks and to ensure the agriculturist of a floor price for his produce.

Medical Services in the State continue to receive special attention from my Government. Over the last five years, 224 new institutions have been established as compared with only 71 in the period 1960-61 to 1971-72. There are now 1,671 medical institutions in the State and the bed-strength has increased to 30,720, the bed to population ratio being 1 : 953. The annual budget of the State on health and family planning services has increased substantially over the years to Rs. 40.04 crores during the current year. There has been substantial progress in the control of communicable diseases like tuberculosis, leprosy and filaria. Though there has been a recurrence of malaria on a nation-wide scale, steps are being taken in accordance with a strategy of collective containment to combat this disease. The number of doctors in the State has now

risen to 3,883, so that there is one doctor for every 7,500 persons.

Persuasion has been the basis of the State's family planning policy, as a result of which nearly 4,00,000 persons have come forward to be sterilised by the end of January 1977. As an integral part of the State's family planning programme, about 2.5 lakh mothers and 84,000 children have been supplied with iron and folic acid tablets against nutritional anaemia under maternal and child health services. During 1977-78, we intend continuing our composite family planning programme, in which the women and children of the vulnerable sections of society would be provided with health and nutritional care, while motivating more persons to adopt family planning.

Expenditure on Education during the current year will be of the order of Rs. 112 crores. To-day there are 4.5 lakh children in primary schools and 6 lakh children studying in secondary schools. The number of teachers has also increased substantially over the years so that to-day there are 26,563 secondary school teachers and 1,01,778 primary school teachers. The Government grant per class room has been increased to Rs. 4,500 from Rs. 2,500 with effect from the current year. Fifty additional pre-primary centres were started during the current year in places where there is a concentration of persons from the Scheduled Castes and Scheduled Tribes and it is hoped that these centres

will foster the school-going habit in children right from pre-primary stage itself. The midday meals programme has been expanded to cover 15 lakh school children. Free text-books are being provided to 1,60,000 children belonging to the Scheduled Castes studying in primary schools and 70,000 girl students of these communities are being given attendance scholarships in the form of uniforms. Four hundred more book banks have been established during the current year in selected high schools.

The three universities in the State continue to be liberally assisted in implementing their development programmes. A scheme for imparting special coaching to students from the Scheduled Castes and Scheduled Tribes in all polytechnic and engineering colleges has been introduced.

My Government continues to be fully committed to the welfare of the members of Scheduled Castes/ Scheduled Tribes and to the weaker sections of society. Based upon the Havanur Commission we have been able to identify and order reservation of employment for persons from the weaker sections of our society, in Government and Government-aided institutions. Free legal aid is now provided to persons belonging to the Scheduled Castes and Scheduled Tribes. A special plan with an outlay of Rs. 25.5 crores has been prepared for the development of the Scheduled Castes and Scheduled Tribes during the remaining period of the

5th Plan. Forty-seven hostels started in 1974-75 have been completed and 13 more buildings are under completion. Twelve fresh hostel buildings were sanctioned during the current year.

City Improvement Trust Boards have been formed in the cities of Hubli-Dharwar, Shimoga, Belgaum, Bhadravati, Davangere and Mangalore. We propose to constitute such Boards in Bellary and Bijapur shortly. All cities having a population of more than 50,000 and all district headquarters will be covered by the statutory provisions of the Karnataka Town and Country Planning Act. An outline development plan for the Vijayanagar Steel Planning Area is also nearing completion.

The Bangalore Urban Art Commission has been constituted to advise on the development of the city so as to improve its environment and aesthetic qualities. A State Environment Board has also been formed to take care of the problems of environmental pollution, destruction of flora and fauna and also of the physical and living environment of our urban and rural settlements.

The Karnataka Urban Water Supply and Drainage Board has completed water supply schemes for nine municipalities serving a population of 20.92 lakhs. Twenty piped water supply schemes costing Rs. 182.66 lakhs and 31 improvement schemes costing Rs. 280.63 lakhs are in various stages of progress. In Hubli-

Dharwar, augmentation of water supply from Malaprabha Reservoir is being taken up at an estimated cost of Rs. 8 crores.

The Bangalore Water Supply and Sewerage Board has taken up water supply schemes for Yelahanka Satellite Township, at a cost of Rs. 1.11 crores, a water supply line to the Aero Engine factory at a cost of Rs. 1.18 crores, a water supply scheme for industries near Whitefield at a cost of Rs. 1 crore, and the second stage of the Cauvery water supply scheme at an estimated cost of Rs. 2.50 crores.

Eleven towns and cities in the State have been provided with underground drainage facilities, and 20 underground drainage schemes at a cost of Rs. 28.23 lakhs are in various stages of progress.

About 161 slums in Bangalore City, 52 slums in Hubli-Dharwar, 9 slums in Mysore City and 208 slums in 14 cities have been declared as slum clearance areas under Section 3 of the Slum Clearance Act 1973. The Slum Clearance Board has prepared layouts and estimates for the slum clearance/improvement works in these municipalities. The Corporation of the City of Bangalore itself has already spent a sum of Rs. 43.94 lakhs for slum clearance/improvement schemes.

Sites have been so far distributed to a total number of 7.29 lakh families out of a total of 8.33 lakh families identified as eligible under the scheme for

giving house-sites to landless workers in rural areas. Of these, 2.48 lakh sites have been given to families belonging to Scheduled Castes and Scheduled Tribes. One lakh and eighteen thousand people's houses have been sanctioned since 1973-74, of which 46,180 houses have been completed. We hope to complete the remaining houses by the end of the current financial year.

The Karnataka Housing Board has received Rs. 5.92 crores financial assistance from HUDCO for the construction of 3,223 houses which are in various stages of progress. A further 3,760 houses will be taken up by the Board on a fresh loan of Rs. 4.93 crores from HUDCO.

Almost all the villages in the State have been provided with drinking water wells and as many as 4,560 drinking water wells have been completed during the last three years. This still leaves a spill-over of 1,500 wells which are in various stages of completion. During the current year, 2,286 bore wells have been sunk, of which 1,842 have been successful. We plan to sink 2,500 more bore wells during the coming year.

Protected water supply under the NRWS Scheme has been given to 243 of the 752 villages taken up. During 1977-78 we plan to complete 150 more of these schemes. So far, a population of 33 lakhs has been covered under the NRWS Scheme.

Investment in irrigation continues to be one of the major thrusts in my Government's development programme. We feel this investment is needed to stabilise agriculture and to increase agricultural production substantially. The area under irrigation has risen to 18 lakh hectares or about 18 per cent of the area sown. Over the last five years Rs. 208 crores have been invested. The Malaprabha Dam has been completed and water impounded. The Kabini Dam is complete. The Hidkal Dam and the Ghataprabha will be completed in June 1977 and a storage of 35 TMC will be created. The Hemavathi and Harangi Dams are in progress and will be completed by the end of 1977-78. This year, a substantial investment will be made in the Upper Krishna Project also. A number of medium irrigation works are in progress while a large number of minor irrigation works have been taken up all over the State. During the last five years, over 84,000 hectares of existing ayacut will have been stabilised and about 1,50,000 hectares of fresh area brought under irrigation, through minor irrigation projects.

Taluk-wise ground water surveys have been completed in the 175 taluks of the State. A special drive to complete 51,500 incomplete irrigation wells sanctioned during the current year has been taken up. To-day we have 4.40 lakh irrigation wells in the State.

The scarcity conditions prevalent this year prevented the sowing of hybrid jowar. The department of agriculture gave timely advice to farmers to sow alternative crops. Ten thousand hectares around Bangalore and Mangalore are being developed as part of the Indo-Bulgarian project for horticulture.

Under the Land Reforms law passed in this State, tenancy has been abolished except for a few categories. 7,27,113 applications from tenants had been received till the end of December, 1976. These applications involved an extent of 40 lakh acres of land. So far, 2,22,000 applications have been disposed of, in which occupancy rights have been decided in favour of tenants in 1,47,473 cases. 40,000 hectares of land have been declared as surplus of which 9,700 hectares have been taken possession of, and will be distributed in accordance with the law.

A major breakthrough has been achieved in the re-organisation of Primary Agricultural Co-operative Credit Societies into viable units. 8,300 societies have been re-organised into 3,612 viable units so far and another 600 units are under re-organisation. A comprehensive rural credit programme of Rs. 200 crores has been drawn up. One hundred Farmers' Service Societies and 114 Sericulture-**cum**-Farmers' Service Societies have been set up. One more co-operative sugar factory, that at Kollegal, was commissioned during 1975-76 season and we hope to commission

one at Raibag before this financial year is out. Another factory at Davangere will be commissioned during 1977-78. The co-operative sugar factory at Chunghankatte will be commissioned in 1978-79.

Three Rural Banks have been formed to finance rural development in ayacut areas in the Tungabhadra, Malaprabha, Ghataprabha and Cauvery basins. The State Land Development Bank has so far advanced Rs. 149 crores. During the last five years the increase in its lending has been of the order of Rs. 86 crores.

There are 106 main markets and 135 sub-markets functioning in the State to-day. We propose to establish 6 more sub-markets. Thirty-nine markets have been taken up for development in the first and second phases under the World Bank Scheme.

My Government has succeeded in launching a massive live-stock production programme for small farmers in 10 districts of the State. Seven districts have been selected for promotion of sheep rearing, 6 districts for calf rearing, 3 districts for poultry and 3 districts for piggery.

The dairy programme has been successful and we are facing the problem of surplus milk. The Bangalore Dairy will be expanded and a new dairy will be established in Bijapur during the coming year. It is proposed to establish a powderplant to solve the problem of surplus milk during the flush season.

The demand for Power continues to exceed its availability. Owing to the partial failure of monsoons the Linganamakki Reservoir did not reach the maximum level. My Government was compelled to increase the power-cut progressively upto 50 per cent. The 9th unit of Sharavathi Project has been commissioned but it is working on part load, owing to certain defects. The 10th unit will be commissioned in March 1977.

The first unit of the Linganamakki dam power house is expected to be commissioned in June 1978.

The first unit of the Nagjhari power house will also be commissioned in June 1978.

The Chakra diversion scheme, which is intended to supply power for the Kudremukh iron ore project is in progress and when completed will yield an additional energy of 500 million units. We propose to take up the Varahi, Bedthi, Gersoppa Tail Race Schemes and Kalinadi second stage project in the coming year. We are also seeking to establish some gas turbine units in the State which will meet, in some measure, the needs of industries in Bangalore.

There has been a steady growth in industry in both the public and private sectors during the last year. My Government has prepared the infra-structure necessary for the State's industrial advancement. The Visvesvaraya Iron and Steel plant which earned a net profit of Rs. 165.38 lakhs in the year 1975-76 is

expected to complete its Forge Plant Project by October 1977. Messrs. NGEF have registered a record profit of Rs. 3.60 crores. Messrs. Bharat Heavy Electricals Ltd., a Government of India concern, has taken over the management of REMCO and we have hopes that they will be able to expand and diversify production in these units with substantial investment during the next few years. Hutti Gold Mines Co., Ltd., is having difficulty in clearing its gold stocks; efforts are under way to get the Government of India to take the entire production of the Company on a mutually agreed basis. The Karnataka State Industrial Development Corporation continues to secure and assist in the establishment and growth of industries in the State. A new Corporation has been established to encourage and develop the manufacture of electronic equipments. We have formed the Karnataka Shipping Corporation which has purchased two ships with a total tonnage of 42,000 DWT.

The growth of small industries side by side with large industries has been one of the primary efforts of my Government.

The State Handicrafts Development Corporation is expected to reach a record turnover of Rs. 1 crore before the end of the curent year. Industrial estates are being established in places suitable for industry. The Handlooms Development Corporation has been formed to encourage and strengthen handloom weavers. It has

pioneered four intensive handloom projects in Rabkavi-Banahatti, Ilkal, Ramdurg and Ranebennur.

Karnataka accounts for 85 per cent of the India's production of mulberry raw silk. One lakh hectares of land are under mulberry cultivation. At present the sericulture and silk industry, in producing 2,100 tonnes of silk, provides a living to 25 lakh ryots. We plan to provide 50 lakh ryots with a living through sericulture in five years' time by doubling the output of silk. The Government of India has sanctioned Rs. 70 crores to implement this scheme.

The development and proper exploitation of our forest wealth is necessary for both ecological balance and industrial growth. Afforestation and reforestation programmes have covered 30,000 hectares, which is about 8,000 hectares more than was covered in 1975-76. The cutting of trees in this State has been regulated by law.

A pre-requisite to the opening up of the rural areas to industry and trade is the construction of good roads. The Public Works Department to-day maintains 61,657 kilometres of roads. There are 47 kilometres of road length to every 100 sq. kilometres area of the State. The Kudremukh-Mangalore road, which has been taken up on a priority basis, should be completed by the end of this month.

In March 1972, when my Government took office, there were only 1.38 lakh vehicles registered in the

State. To-day, there are more than 2.42 lakh vehicles. The State has been allotted 400 national permits, of which 236 have been issued. The Karnataka State Road Transport Corporation's fleet strength is 4,393 at present. The Corporation's investment is now over Rs. 50 crores and its revenue for this year is expected to be Rs. 65 crores.

We have been fortunate in having a year of continued harmony in industry. Labour and management relationships have, on the whole, been co-operative.

My Government's relations with its employees have always been sympathetic. Its decision on the Pay Commission's recommendations has already been announced. Our employees will now be among the best paid State Government employees in the country. Government servants have also been given liberal advances to buy foodgrains. Their housing continues to be a major problem, but so far it has been possible to provide 58 per cent of the permanent police staff in the State with residential accommodation.

The Annual Plan for 1977-78 will be presented to you along with the Budget Estimates. Certain Bills which had been placed before you during the previous session but which could not be considered and certain Bills to replace Ordinances issued will be placed before you.

I have every reason to hope that you will endeavour to redouble your efforts to fulfil the high expectations of the people of this State with sincerity and dedication in providing them with an even greater measure of socio-economic well-being in the coming year.

I wish you all success in your labours.

JAI HIND

ರಾಜ್ಯಪಾಲರ ಭಾಷಣ

ವಿಧಾನಮಂಡಲದ ಸದಸ್ಯ ಮಹಾಶಯರೇ,

ವಿಧಾನಮಂಡಲದ ಈ ಅಧಿವೇಶನಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ತುಂಬ ಸಂತೋಷವೆನಿಸುತ್ತದೆ.

ನೀವು ಇದೀಗ ಚುನಾವಣೆಯ ರಂಗದಿಂದ ಮರಳಿ ಬಂದಿದ್ದೀರಿ. ಜನ ಸಂಪರ್ಕವನ್ನು ನೀವು ನಿಜವಾಗಿಯೂ ನವೀಕರಿಸಿಕೊಂಡಿದ್ದೀರಿ. ಜನತೆಯ ನಾನಾ ತೊಂದರೆಗಳನ್ನೂ ಸಮಸ್ಯೆಗಳನ್ನೂ ಚೆನ್ನಾಗಿ ಅರಿತವರಾಗಿದ್ದು, ಆ ತೊಂದರೆ ಗಳನ್ನು ನಿವಾರಿಸಲು ನಮ್ಮ ಸರ್ಕಾರವು ಏನು ಮಾಡಿದೆ, ಇನ್ನೂ ಏನು ಮಾಡಬೇಕು ಎಂಬುದನ್ನು ಚರ್ಚಿಸಲು ಬಂದಿದ್ದೀರಿ.

ಕಳೆದ ವರ್ಷ ಮೂಡಿಬಂದ ಆರ್ಥಿಕ ಪ್ರಯೋಜನಗಳು ಇದೀಗ ಜನರ ಗಮನವನ್ನು ಸೆಳೆಯುತ್ತಿವೆ. ನಮ್ಮ ಅರ್ಥವ್ಯವಸ್ಥೆಯೂ ನವಚೇತನವನ್ನು ಪಡೆದಿದೆ. 25 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೊಳಿಸುವ ಕಾರ್ಯಕ್ರಮಕ್ಕೆ ನಮ್ಮ ಸರ್ಕಾರವು ಮುಂದೆಯೂ ಬದ್ಧವಾಗಿದೆ. ರಾಷ್ಟ್ರದ ವರಮಾನವನ್ನು ಹೆಚ್ಚಿ ಸುವುದು ಮತ್ತು ಅದನ್ನು ಸಮಾಜದ ಎಲ್ಲ ವರ್ಗಗಳಲ್ಲೂ ಸಮವಾಗಿ ಹಂಚುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಕಳೆದ ವರ್ಷ ಈ ಕಾರ್ಯಕ್ರಮವನ್ನು ಜಾರಿ ಗೊಳಿಸುವಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ.

ಕರ್ನಾಟಕದಲ್ಲಿ ಆಹಾರಧಾನ್ಯ ಮತ್ತು ಅಗತ್ಯ ಸರಕುಗಳ ಬೆಲೆಗಳು ಈ ವರ್ಷ ಇಳಿಮುಖವಾಗಿದ್ದವು. ಖಾದ್ಯ ತೈಲಗಳ ಬೆಲೆಗಳು ಏರಿವೆ. ಅಂತೆಯೇ ವಿದೇಶ ಗಳಿಂದ ಖಾದ್ಯತೈಲಗಳನ್ನು ಆಮದು ಮಾಡಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳ ಲಾಗುತ್ತಿದೆ. ದುರ್ದೈವದಿಂದ ಈ ವರ್ಷ ರಾಜ್ಯದ ಅನೇಕ ಭಾಗಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿದೆ. ನಮ್ಮ ಸರ್ಕಾರವು ರಾಜ್ಯದ 117 ತಾಲೂಕುಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಸಾರಿದೆ ಮತ್ತು ಈ ತಾಲೂಕುಗಳಲ್ಲಿ ಇಂದಿನ ವರೆಗೆ ಪರಿಹಾರ ಕಾಮಗಾರಿಗಳಿಗಾಗಿ ಸುಮಾರು ಹದಿನಾರು ಕೋಟಿ ರೂಪಾಯಿ

ಹಣ ಬೆಚ್ಚ ಮಾಡಿದೆ. ಪಾಡಿಕೆಯ ಯೋಜನಾ ವೆಚ್ಚವನ್ನು ಗಮನಿಸಿದರೆ, ಈ ಅಭಾವ ಪೀಡಿತ ತಾಲೂಕುಗಳಲ್ಲಿ ವೆಚ್ಚಮಾಡಿದ ಒಟ್ಟು ಸೊಬಲಗು ಸುಮಾರು 39 ಕೋಟಿ ರೂಪಾಯಿಯಾಗುವುದು. ಬರಗಾಲಪೀಡಿತ ತಾಲೂಕುಗಳಲ್ಲಿ ನೀರಾವರಿಯಾದ ಭಾಗಗಳನ್ನು ಬಿಟ್ಟು ಉಳಿದ ಪ್ರದೇಶಗಳಲ್ಲಿ ಆಹಾರಧಾನ್ಯ ಎತ್ತುವಳಿಯನ್ನು ಮಾಫಿ ಮಾಡಬೇಕಾಯಿತು. ವ್ಯವಸಾಯಗಾರರಿಗೆ ಹಣ ಸಾಲ ಕೊಡುವ ಕಾರ್ಯಕ್ರಮವನ್ನು ಮುಂದುವರಿಸಲು ಬೇಕಾಗುವಷ್ಟು ಕನಿಷ್ಠ ವಸೂಲಿಯನ್ನು ಮಾಡಲು ಸಾಧ್ಯವಾಗದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಆರ್ಥಿಕ ಸಹಾಯವನ್ನೂ ನೀಡಬೇಕಾಯಿತು.

ಅಭಾವ ಪರಿಸ್ಥಿತಿ ಇದ್ದರೂ, ನೀರಾವರಿ ಸೌಲಭ್ಯವಿರದ ಬರಗಾಲ ಪೀಡಿತ ಪ್ರದೇಶಗಳಲ್ಲಿ ಎತ್ತುವಳಿಯನ್ನು ಮಾಫಿ ಮಾಡಬೇಕಾಗಿ ಬಂದರೂ ನಮ್ಮಲ್ಲಿ ಆಹಾರ ಧಾನ್ಯಗಳ ಕಾಪು ದಾಸ್ತಾನು ಮಾತ್ರ ಭದ್ರಪಡಿಸಲಾಗಿದೆ. ಇನ್ನೂ 11 ಪುರಸಭಾ ಪ್ರದೇಶಗಳಿಗೆ ಅನೌಪಚಾರಿಕ ಪಡಿತರವನ್ನು ವಿಸ್ತರಿಸಲೂ ನಿರ್ಧರಿಸಿದ್ದೇವೆ. ಆಗ, 40,000 ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಎಲ್ಲ ಪಟ್ಟಣ ಮತ್ತು ನಗರಗಳಲ್ಲೂ ಅನೌಪಚಾರಿಕ ಪಡಿತರ ಪದ್ಧತಿಯನ್ನು ಜಾರಿ ಮಾಡಿದಂತಾಗುವುದು. ಬಳಕೆದಾರರಿಗೆ ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಆಹಾರಧಾನ್ಯವನ್ನೂ ಸಕ್ಕರೆಯನ್ನೂ ಪೂರೈಸುವ ಕ್ರಮವು ತೃಪ್ತಿಕರವಾಗಿದೆ. ರಾಜ್ಯದ ಸಮಗ್ರ ಜನತೆಯ ಪುಷ್ಟೀಕರಣಕ್ಕಾಗಿ 15,952 ನ್ಯಾಯ ಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 12,046 ಅಂಗಡಿಗಳು ಗ್ರಾಮಾಂತರ ಪ್ರದೇಶಗಳಲ್ಲಿವೆ. ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ಕಾರ್ಪೊರೇಷನ್ ಸರ್ಕಾರಕ್ಕೆ ಕಾಪು ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ಬತ್ತ, ಜೋಳ ಮತ್ತು ರಾಗಿಯನ್ನು ಕೊಳ್ಳುವ ಮತ್ತು ವ್ಯವಸಾಯಗಾರನ ಉತ್ಪಾದನೆಗೆ ನ್ಯಾಯಬೆಲೆಯನ್ನು ನಿಗದಿಮಾಡುವ ಎರಡೂ ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತಲಿದೆ.

ನಮ್ಮ ಸರ್ಕಾರವು ರಾಜ್ಯದಲ್ಲಿ ವೈದ್ಯ ಸೇವೆಗಳಿಗೆ ವಿಶೇಷ ಗಮನಕೊಡುತ್ತಿದೆ. ಕಳೆದ 5 ವರ್ಷಗಳ ಅವಧಿಯಲ್ಲಿ 224 ಹೊಸ ವೈದ್ಯ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. 1960-61 ರಿಂದ 1971-72ರ ಅವಧಿಯಲ್ಲಿ ಇಂಥ ಹೊಸ 71 ಸಂಸ್ಥೆಗಳು ಮಾತ್ರ ಆದ್ದವು. ಈಗ ರಾಜ್ಯದಲ್ಲಿ 1,671 ವೈದ್ಯ ಸಂಸ್ಥೆಗಳಿವೆ ಮತ್ತು ಹಾಸಿಗೆಗಳ ಸಂಖ್ಯೆ 30,720ಕ್ಕೆ ಏರಿದೆ. ಜನಸಂಖ್ಯೆ ಮತ್ತು ಆಸ್ಪತ್ರೆಗಳಲ್ಲಿ ಒದಗಿಸಿರುವ ಹಾಸಿಗೆಗಳ ದಾಮಾಷಾ ಪ್ರಮಾಣ 1 : 953 ರಷ್ಟಿದೆ. ಆರೋಗ್ಯ ಮತ್ತು

ಕುಟುಂಬ ಯೋಜನಾ ಸೇವೆಗೆ ರಾಜ್ಯದ ವಾರ್ಷಿಕ ಬಜೆಟ್ಟಿನಲ್ಲಿ ಒದಗಿಸಿದ ಹಣ ಹಿಂದಿನ ವರ್ಷದಲ್ಲಿ ಕ್ರಮೇಣ ಹೆಚ್ಚಾಗುತ್ತ, ಪ್ರಸಕ್ತವರ್ಷ 40.04 ಕೋಟಿ ರೂಪಾಯಿಗೆ ಏರಿದೆ. ಕ್ಷಯ, ಕುಷ್ಠ ಮತ್ತು ಫೈಲೇರಿಯಾಗಳಂಥ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ. ಮಲೇರಿಯಾ ರೋಗವು ಮತ್ತೆ ದೇಶದಾದ್ಯಂತ ತಲೆಯೆತ್ತುತ್ತಿದೆಯಾದರೂ ಈ ರೋಗವನ್ನು ತಡೆಗಟ್ಟಲು ವ್ಯಾಪಕ ಯೋಜನೆಯನ್ನು ರೂಪಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಈಗ ರಾಜ್ಯದಲ್ಲಿ ವೈದ್ಯರ ಸಂಖ್ಯೆಯು 3,883ಕ್ಕೆ ಏರಿದೆ. ಹೀಗೆ ಪ್ರತಿ 7,500 ವ್ಯಕ್ತಿಗಳಿಗೆ ಒಬ್ಬ ವೈದ್ಯನ ಸೇವೆ ದೊರೆಯುವಂತಾಗಿದೆ.

ಮನಮೊಲಿಸುವ ಧೋರಣೆಯೇ ರಾಜ್ಯ ಸರ್ಕಾರದ ಕುಟುಂಬ ಯೋಜನೆಯ ಪ್ರಮುಖ ಆಧಾರವಾಗಿದ್ದು, ಅದರ ಫಲವಾಗಿ 1977ರ ಜನವರಿ ತಿಂಗಳ ಕೊನೆಯ ವರೆಗೆ 4,06,000 ಜನರು ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಮುಂದೆ ಬಂದಿದ್ದಾರೆ. ರಾಜ್ಯ ಕುಟುಂಬ ಯೋಜನೆಯ ಅವಿಭಾಜ್ಯ ಅಂಗವಾಗಿ ತಾಯಿಮಕ್ಕಳ ಆರೋಗ್ಯ ಸೇವಾ ಕಾರ್ಯಕ್ರಮದ ಮೇರೆಗೆ ಪೌಷ್ಟಿಕ ಆಹಾರ ಕೊರತೆಯಿಂದಾಗುವ ರಕ್ತಹೀನತೆ ತಡೆಗಟ್ಟಲು ಕಬ್ಬಿಣ ಮತ್ತು ಫೋಲಿಕ್ ಆಮ್ಲದ ಮಾತ್ರೆಗಳನ್ನು ಸುಮಾರು 2.5 ಲಕ್ಷ ತಾಯಂದಿರಿಗೂ 84,000 ಮಕ್ಕಳಿಗೂ ಒದಗಿಸಲಾಗಿದೆ. 1977–78ರ ಅವಧಿಯಲ್ಲಿ ನಮ್ಮ ಸಂಯುಕ್ತ ಕುಟುಂಬಯೋಜನಾ ಕಾರ್ಯಕ್ರಮವನ್ನು ಮುಂದುವರಿಸಲಾಗುವುದು. ಈ ಯೋಜನೆಯ ಮೇರೆಗೆ ಹೆಚ್ಚು ಹೆಚ್ಚು ಜನರಿಗೆ ಕುಟುಂಬ ಯೋಜನಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲಾಗುವುದಲ್ಲದೆ, ಸಮಾಜದ ದುರ್ಬಲವರ್ಗದ ಮಹಿಳೆಯರಿಗೂ ಮಕ್ಕಳಿಗೂ ಆರೋಗ್ಯ ಮತ್ತು ಪೌಷ್ಟಿಕಾಹಾರ ಸೌಲಭ್ಯಗಳನ್ನು ಒದಗಿಸಲಾಗುವುದು.

ಪ್ರಸಕ್ತ ವರ್ಷ ಶಿಕ್ಷಣಕ್ಕಾಗಿ ಸುಮಾರು 112 ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು. ಸದ್ಯಕ್ಕೆ ಪ್ರಾಥಮಿಕ ಶಾಲೆಗಳಲ್ಲಿ 4.5 ಲಕ್ಷ ಮಕ್ಕಳೂ ಸೆಕೆಂಡರಿ ಶಾಲೆಗಳಲ್ಲಿ 6 ಲಕ್ಷ ಮಕ್ಕಳೂ ಶಿಕ್ಷಣ ಪಡೆಯುತ್ತಿದ್ದಾರೆ. ಕಳೆದ ವರ್ಷಗಳಲ್ಲಿ ಶಿಕ್ಷಕರ ಸಂಖ್ಯೆಯೂ ಗಮನಾರ್ಹವಾಗಿ ಏರಿದೆ. ಸದ್ಯಕ್ಕೆ ರಾಜ್ಯದಲ್ಲಿ 26,563 ಸೆಕೆಂಡರಿ ಶಾಲಾ ಶಿಕ್ಷಕರೂ 1,01,778 ಪ್ರಾಥಮಿಕ ಶಾಲಾ ಶಿಕ್ಷಕರೂ ಕೆಲಸ ಮಾಡುತ್ತಿದ್ದಾರೆ. ಸರ್ಕಾರದವರು ಶಾಲೆಯ ವರ್ಗ–ಕೊಠಡಿಯೊಂದಕ್ಕೆ ಮಂಜೂರು ಮಾಡುತ್ತಿದ್ದ 2,500 ರೂಪಾಯಿ ಧನ ಸಹಾಯವನ್ನು ಪ್ರಸಕ್ತವರ್ಷದಿಂದ 4,500 ರೂಪಾಯಿಗೆ ಏರಿಸಲಾಗಿದೆ. ಹರಿಜನ, ಗಿರಿಜನರು ಹೆಚ್ಚಾಗಿರುವ

ಸ್ಥಳಗಳಲ್ಲಿ ಪ್ರಸಕ್ತ ವರ್ಷ ಇನ್ನೂ 50 ಪ್ರಾಥಮಿಕ-ಪೂರ್ವ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇದರಿಂದಾಗಿ ಶಾಲಾ-ಪೂರ್ವ ಹಂತದಿಂದಲೇ ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸವು ಮೂಡುವುದೆಂದು ನಿರೀಕ್ಷಿಸಲಾಗಿದೆ. ಮಧ್ಯಾಹ್ನ ಊಟದ ಕಾರ್ಯಕ್ರಮವನ್ನು 15 ಲಕ್ಷ ಶಾಲಾ ಮಕ್ಕಳಿಗೆ ಅನ್ವಯವಾಗುವಂತೆ ವಿಸ್ತರಿಸಲಾಗಿದೆ. ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿರುವ ಹರಿಜನ ವರ್ಗಕ್ಕೆ ಸೇರಿದ 1,60,000 ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಉಚಿತವಾಗಿ ಒದಗಿಸ ಲಾಗುತ್ತಿದೆ; ಮತ್ತು ಈ ವರ್ಗಕ್ಕೆ ಸೇರಿದ 70,000 ವಿದ್ಯಾರ್ಥಿನಿಯರಿಗೆ ಸಮ ವಸ್ತ್ರಗಳ ರೂಪದಲ್ಲಿ ಹಾಜರಾತಿ ಶಿಷ್ಯವೃತ್ತಿಗಳನ್ನು ಕೊಡಲಾಗುತ್ತಿದೆ. ಆಯ್ಕೆ ಮಾಡಿದ ಪೌಢಶಾಲೆಗಳಲ್ಲಿ ಪ್ರಸಕ್ತವರ್ಷ ಇನ್ನೂ ನಾಲ್ಕು ನೂರು ಪುಸ್ತಕ ಬ್ಯಾಂಕು ಗಳನ್ನು ಸ್ಥಾಪಿಸಲಾಗಿದೆ.

ರಾಜ್ಯದಲ್ಲಿರುವ ಮೂರು ವಿಶ್ವವಿದ್ಯಾನಿಲಯಂಗಳಿಗೆ ಅಭಿವೃದ್ಧಿ ಕಾರ್ಯಕ್ರಮ ಗಳನ್ನು ಕೈಕೊಳ್ಳಲು ಉದಾರ ಧನಸಹಾಯ ನೀಡಲಾಗುತ್ತಿದೆ. ಎಲ್ಲ ಪಾಲಿಟೆಕ್ನಿಕ್ ಗಳಲ್ಲಿ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹರಿಜನ ಹಾಗೂ ಗಿರಿಜನ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ.

ನಮ್ಮ ಸರ್ಕಾರವು ಹರಿಜನ, ಗಿರಿಜನರ ಮತ್ತು ಸಮಾಜದ ದುರ್ಬಲ ವರ್ಗಗಳ ಜನ ಕ್ಷೇಮಾಭಿವೃದ್ಧಿಗೆ ಸಂಪೂರ್ಣವಾಗಿ ಕಂಕಣಬದ್ಧವಾಗಿದೆ. ಹಾವನೂರ ಆಯೋಗದ ಶಿಫಾರಸುಗಳನ್ನು ಆಧಾರವಾಗಿಟ್ಟುಕೊಂಡು, ನಮ್ಮ ಸಮಾಜದ ದುರ್ಬಲವರ್ಗಗಳ ಜನರನ್ನು ಗುರುತಿಸಿ, ಅವರಿಗೆ ಸರ್ಕಾರದಲ್ಲಿ ಮತ್ತು ಸರ್ಕಾರೀ ಸಹಾಯ ಪೋಷಿತ ಸಂಸ್ಥೆಗಳಲ್ಲಿ ನೌಕರಿಗಳನ್ನು ಕಾದಿರಿಸುವಂತೆ ಆದೇಶವನ್ನೂ ನೀಡ ಲಾಗಿದೆ. ಹರಿಜನ ಮತ್ತು ಗಿರಿಜನರಿಗೆ ಉಚಿತ ಕಾನೂನು ಸಹಾಯವನ್ನೂ ಏರ್ಪಡಿಸಲಾಗಿದೆ. 5ನೆಯ ಯೋಜನೆಯ ಇನ್ನುಳಿದ ಅವಧಿಯಲ್ಲಿ ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗಾಗಿ 25.5 ಕೋಟಿ ರೂಪಾಯಿ ವೆಚ್ಚದ ಒಂದು ವಿಶೇಷ ಯೋಜನೆಯನ್ನು ರೂಪಿಸಲಾಗಿದೆ. 1974-75ರ ಅವಧಿಯಲ್ಲಿ ಪ್ರಾರಂಭಿಸಿದ ನಲವತ್ತೇಳು ಹಾಸ್ಟೆಲುಗಳನ್ನು ಪೂರ್ತಿಗೊಳಿಸಲಾಗಿದೆ, ಅಲ್ಲದೆ ಇನ್ನೂ 13 ಹಾಸ್ಟೆಲು ಕಟ್ಟಡಗಳನ್ನು ಇಷ್ಟರಲ್ಲೇ ಪೂರ್ತಿಗೊಳಿಸಲಾಗುವುದು. ಪ್ರಸಕ್ತ ವರ್ಷದಲ್ಲಿ ಹನ್ನೆರಡು ಹೊಸ ಹಾಸ್ಟೆಲು ಕಟ್ಟಡಗಳಿಗೆ ಮಂಜೂರಾತಿ ನೀಡಲಾಗಿದೆ.

ಹುಬ್ಬಳ್ಳಿ-ಧಾರವಾಡ, ಶಿವಮೊಗ್ಗ, ಬೆಳಗಾಂವಿ, ಭದ್ರಾವತಿ, ದಾವಣಗೆರೆ ಮತ್ತು ಮಂಗಳೂರು ನಗರಗಳಲ್ಲಿ ಪ್ರಸಕ್ತ ವರ್ಷ ನಗರಾಭಿವೃದ್ಧಿ ಪಂಡಲಿಗಳನ್ನು ರಚಿಸಲಾಗಿದೆ. ಬಳ್ಳಾರಿ ಮತ್ತು ವಿಜಾಪುರ ನಗರಗಳಲ್ಲಿ ಇಂಥ ಪಂಡಲಿಗಳನ್ನು

ಇಷ್ಟರಲ್ಲೇ ರಚಿಸುವ ವಿಚಾರವಿದೆ. 50,000ಕ್ಕೂ ಹೆಚ್ಚಿಗೆ ಜನಸಂಖ್ಯೆಯಿರುವ ಎಲ್ಲ ನಗರಗಳಿಗೆ ಮತ್ತು ಎಲ್ಲ ಜಿಲ್ಲಾ ಮುಖ್ಯ ಸ್ಥಳಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಉಪಬಂಧಗಳನ್ನು ವಿಸ್ತರಿಸಲಾಗುವುದು. ವಿಜಯನಗರ ಸ್ಟೀಲ್ ಪ್ಲಾನಿಂಗ್ ಏರಿಯಾ ಬಗ್ಗೆ ಅಭಿವೃದ್ಧಿ ಯೋಜನೆಯ ರೂಪ ರೇಷೆಗಳನ್ನು ಪೂರ್ತಿಗೊಳಿಸಲಾಗುತ್ತಿದೆ.

ಬೆಂಗಳೂರು ನಗರ ಸೌಂದರ್ಯವನ್ನೂ ಪರಿಸರವನ್ನೂ ಉತ್ತಮಗೊಳಿಸುವಂತೆ ನಗರದ ಬೆಳವಣಿಗೆಯ ಕುರಿತು ಸಲಹೆ ನೀಡಲು ಬೆಂಗಳೂರು ನಗರ ಕಲಾ ಆಯೋಗವನ್ನು (ಬೆಂಗಳೂರು ಅರ್ಬನ್ ಆರ್ಟ್ ಕಮಿಷನ್) ರಚಿಸಲಾಗಿದೆ. ಪರಿಸರ ಮಾಲಿನ್ಯ, ಸಸ್ಯ ಮತ್ತು ಪ್ರಾಣಿ ನಾಶ ಮತ್ತು ನಮ್ಮ ನಗರ ಹಾಗೂ ಗ್ರಾಮಾಂತರ ವಸತಿಗಳ ಭೌತಿಕ ಹಾಗೂ ವಾಸದ ಪರಿಸರ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ರಾಜ್ಯ ಪರಿಸರ ಮಂಡಲಿಯೊಂದನ್ನು ರಚಿಸಲಾಗಿದೆ.

ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಲಿಯು 20.92 ಲಕ್ಷ ಜನರಿಗೆ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಒಂಬತ್ತು ನಗರ ಸಭಾ ಪ್ರದೇಶಗಳಿಗಾಗಿ ನೀರು ಪೂರೈಕೆ ಯೋಜನೆಗಳನ್ನು ಸಿದ್ಧಪಡಿಸಿದೆ.

182.66 ಲಕ್ಷ ರೂ. ವೆಚ್ಚದ ಇಪ್ಪತ್ತು ಕೊಳವೆ ನೀರು ಸರಬರಾಜು ಯೋಜನೆಗಳೂ 280.63 ಲಕ್ಷ ರೂ. ವೆಚ್ಚದ 31 ಅಭಿವೃದ್ಧಿ ಯೋಜನೆಗಳೂ ಪ್ರಗತಿಯ ವಿವಿಧ ಹಂತದಲ್ಲಿವೆ. ಹುಬ್ಬಳ್ಳಿ-ಧಾರವಾಡಕ್ಕಾಗಿ 8 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಮಲಪ್ರಭಾ ಜಲಾಶಯದಿಂದ ಇನ್ನೂ ಹೆಚ್ಚು ನೀರು ಪೂರೈಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು, ಯಲಹಂಕ ಉಪನಗರಕ್ಕಾಗಿ 1.11 ಕೋಟಿ ರೂಪಾಯಿ ವೆಚ್ಚದ ನೀರು ಸರಬರಾಜು ಯೋಜನೆಯನ್ನೂ ವಿಮಾನ ಯಂತ್ರೋಪಕರಣ (ಏರೋ ಇಂಜಿನ್) ಕಾರ್ಖಾನೆಗಾಗಿ 1.18 ಕೋಟಿ ರೂ. ವೆಚ್ಚದ ನೀರು ಸರಬರಾಜು ಯೋಜನೆಯನ್ನೂ ವೈಟ್‌ಫೀಲ್ಡಿನ ಸಮೀಪದ ಕೈಗಾರಿಕೆಗಳಿಗಾಗಿ 1 ಕೋಟಿ ರೂಪಾಯಿ ವೆಚ್ಚದ ನೀರು ಸರಬರಾಜು ಯೋಜನೆಯನ್ನೂ 2.50 ಕೋಟಿ ರೂ. ಅಂದಾಜು ವೆಚ್ಚದ ಕಾವೇರಿ ನೀರು ಸರಬರಾಜು ಯೋಜನೆಯ ಎರಡನೆಯ ಹಂತದ ಕಾರ್ಯವನ್ನೂ ಕೈಗೊಂಡಿದೆ.

ರಾಜ್ಯದ ಹನ್ನೊಂದು ನಗರ ಮತ್ತು ಪಟ್ಟಣಗಳಿಗೆ ಒಳಚರಂಡಿ ಸೌಲಭ್ಯಗಳನ್ನೊದಗಿಸಲಾಗಿದೆ, ಮತ್ತು 28.23 ಲಕ್ಷ ರೂ. ಅಂದಾಜು ವೆಚ್ಚದ 20 ಒಳಚರಂಡಿ ಯೋಜನೆಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ.

ಬಂಗಳೂರು ನಗರದ 161 ಕೊಳಚೆ ಪ್ರದೇಶಗಳನ್ನು, ಹುಬ್ಬಳ್ಳಿ-ಧಾರವಾಡದ 52 ಕೊಳಚೆ ಪ್ರದೇಶಗಳನ್ನು, ಮೈಸೂರು ನಗರದ 9 ಕೊಳಚೆ ಪ್ರದೇಶಗಳನ್ನು ಮತ್ತು 14 ನಗರಗಳ 208 ಕೊಳಚೆ ಪ್ರದೇಶಗಳನ್ನು 1973ನೇ ಇಸವಿಯ ಕೊಳಚೆ ನಿರ್ಮೂಲನ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಕೊಳಚೆ ನಿರ್ಮೂಲನವಾಗ ಬೇಕಾದ ಪ್ರದೇಶಗಳೆಂದು ಘೋಷಿಸಲಾಗಿದೆ. ಕೊಳಚೆ ನಿರ್ಮೂಲನ ಮಂಡಲಿಯು, ಮೇಲ್ಕಂಡ ನಗರ ಸಭಾ ಪ್ರದೇಶಗಳಲ್ಲಿ ಕೊಳಚೆ ನಿರ್ಮೂಲನ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ರೂಪರೇಷೆ (ಲೇಔಟ್) ಮತ್ತು ಅಂದಾಜುಗಳನ್ನು ತಯಾರಿಸಿದೆ. ಬೆಂಗಳೂರು ನಗರ ಪುರಸಭೆಯು ಕೊಳಚೆ ನಿರ್ಮೂಲನ ಮತ್ತು ಅಭಿವೃದ್ಧಿ ಕಾರ್ಯ ಗಳಿಗಾಗಿ ಈಗಾಗಲೇ 43.94 ಲಕ್ಷ ರೂ.ಗಳನ್ನು ಮೆಚ್ಚಿಮಾಡಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಭೂ-ರಹಿತ ಕೆಲಸಗಾರರಿಗೆ ಗೃಹನಿವೇಶನಗಳ ನೀಡಿಕೆ ಯೋಜನೆಯ ಮೇರೆಗೆ ಅರ್ಹರೆಂದು ಗುರುತಿಸಲಾದ 8.33 ಲಕ್ಷ ಕುಟುಂಬಗಳ ಪೈಕಿ, ಈವರೆಗೆ ಒಟ್ಟು 7.29 ಲಕ್ಷ ಕುಟುಂಬಗಳಿಗೆ ನಿವೇಶನಗಳನ್ನು ವಿತರಣೆ ಮಾಡಲಾಗಿದೆ. ಈ ಪೈಕಿ 2.48 ಲಕ್ಷ ನಿವೇಶನಗಳನ್ನು ಹರಿಜನ, ಗಿರಿಜನ ಕುಟುಂಬಗಳಿಗೆ ನೀಡಲಾಗಿದೆ. 1973-74 ರಿಂದ 1,18,000 ಜನತಾ ಗೃಹಗಳು ಮಂಜೂರಾಗಿದ್ದು, ಅವುಗಳ ಪೈಕಿ 46,180 ಮನೆಗಳು ಪೂರ್ಣಗೊಂಡಿವೆ. ಉಳಿದ ಮನೆಗಳನ್ನು ಪ್ರಸಕ್ತ ಆರ್ಥಿಕ ವರ್ಷದ ಕೊನೆಯೊಳಗಾಗಿ ಪೂರ್ಣಗೊಳಿಸುವ ನಿರೀಕ್ಷೆಯಿದೆ.

ಪ್ರಗತಿಯ ವಿವಿಧ ಹಂತಗಳಲ್ಲಿರುವ 3,223 ಮನೆಗಳ ನಿರ್ಮಾಣಕ್ಕಾಗಿ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು 'ಹುಡ್‌ಕೋ' ದಿಂದ 5.92 ಕೋಟಿ ರೂಪಾಯಿ ಆರ್ಥಿಕ ನೆರವನ್ನು ಪಡೆದಿದೆ. 'ಹುಡ್‌ಕೋ'ದಿಂದ 4.93 ಕೋಟಿ ರೂಪಾಯಿಯ ಹೊಸ ಸಾಲವನ್ನು ಪಡೆದು ಮಂಡಲಿಯು ಇನ್ನೂ 3,760 ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಿದೆ.

ರಾಜ್ಯದ ಸುಮಾರು ಎಲ್ಲಾ ಹಳ್ಳಿಗಳಿಗೂ ರಾಜ್ಯ ಸರ್ಕಾರವು ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿದೆ. ಕಳೆದ ಮೂರು ವರ್ಷಗಳಲ್ಲಿ ಸುಮಾರು 4,560 ಕುಡಿಯುವ ನೀರಿನ ಬಾವಿಗಳು ಪೂರ್ಣಗೊಂಡಿವೆ. ಪೂರ್ಣಗೊಳ್ಳಬೇಕಾದ ಮಿಕ್ಕ 1,500 ಬಾವಿಗಳ ಕಾಮಗಾರಿಯು ವಿವಿಧ ಹಂತದಲ್ಲಿದೆ. ಪ್ರಸಕ್ತ ವರ್ಷದಲ್ಲಿ 2,286 ಕೊರೆ ಬಾವಿಗಳನ್ನು ತೋಡಿದ್ದು, ಅವುಗಳ ಪೈಕಿ 1,842 ಬಾವಿಗಳಲ್ಲಿ ನೀರು ದೊರೆತಿದೆ. ಮುಂದಿನ ವರ್ಷ ಇನ್ನೂ 2,500 ಕೊರೆ ಬಾವಿ ಗಳನ್ನು ತೋಡುವ ಯೋಜನೆಯಿದೆ.

ಎನ್ ಆರ್ ಡಬ್ಲ್ಯೂ ಎಸ್ ಯೋಜನೆಯ ಮೇರೆಗಿನ ಸುರಕ್ಷಿತ ನೀರು ಪೂರೈಕೆಗಾಗಿ ಆಯ್ದಿರುವ 752 ಗ್ರಾಮಗಳ ಪೈಕಿ 243 ಗ್ರಾಮಗಳಿಗೆ ಸುರಕ್ಷಿತ ನೀರು ಒದಗಿಸಲಾಗಿದೆ. 1977–78ರ ಸಾಲಿನಲ್ಲಿ ಇಂತಹ ಇನ್ನೂ 150 ಯೋಜನೆಗಳನ್ನು ಪೂರ್ಣಗೊಳಿಸುವ ಯೋಜನೆಯಿದೆ. ಈಗ 33 ಲಕ್ಷ ಜನ ಎನ್ ಆರ್ ಡಬ್ಲ್ಯೂ ಎಸ್ ಯೋಜನೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಅಭಿವೃದ್ಧಿ ಯೋಜನೆಯಲ್ಲಿ ನೀರಾವರಿಗೆ ಹಣ ವಿನಿಯೋಗಿಸುವುದು ನಮ್ಮ ಸರ್ಕಾರದ ಮುಖ್ಯ ಕಾರ್ಯನೀತಿಯಾಗಿದೆ. ಕೃಷಿಯನ್ನು ಬಲಪಡಿಸಲು ಮತ್ತು ಕೃಷಿ ಉತ್ಪನ್ನವನ್ನು ಗಣನೀಯವಾಗಿ ಹೆಚ್ಚಿಸಲು ಈ ವಿನಿಯೋಗವು ಅನಿವಾರ್ಯವೆಂದು ಭಾವಿಸಿದ್ದೇವೆ. ನೀರಾವರಿ ಪ್ರದೇಶವು 18 ಲಕ್ಷ ಹೆಕ್ಟೇರುಗಳಷ್ಟು ಅಥವಾ ಬಿತ್ತಿದ ಪ್ರದೇಶದ ಶೇಕಡಾ 18 ರಷ್ಟು ವಿಸ್ತಾರಗೊಂಡಿದೆ. ಕಳೆದ ಐದು ವರ್ಷಗಳಲ್ಲಿ 208 ಕೋಟಿ ರೂಪಾಯಿ ಹಣವನ್ನು ನೀರಾವರಿಗೆ ವಿನಿಯೋಗಿಸಲಾಗಿದೆ, ಮಲಪ್ರಭಾ ಅಣೆಕಟ್ಟು ಪೂರ್ಣಗೊಂಡಿದೆ ಹಾಗೂ ನೀರನ್ನು ಸಂಗ್ರಹಿಸಲಾಗಿದೆ. ಕಬಿನಿ ಅಣೆಕಟ್ಟು ಪೂರ್ಣಗೊಂಡಿದೆ. ಹಿಡಕಲ್ ಮತ್ತು ಘಟಪ್ರಭಾ ಅಣೆಕಟ್ಟುಗಳು 1977ರ ಜೂನ್ ಸುಮಾರಿಗೆ ಪೂರ್ತಿಯಾಗುವ ನಿರೀಕ್ಷೆಯಿದ್ದು, ಆ ಮೂಲಕ 35 ಟಿ.ಎಂ.ಸಿ. ಜಲಸಂಗ್ರಹಣ ಆಗುವುದು. ಹೇಮಾವತಿ ಮತ್ತು ಹಾರಂಗಿ ಅಣೆಕಟ್ಟುಗಳ ನಿರ್ಮಾಣ ಕಾರ್ಯವೂ ಪ್ರಗತಿಯಲ್ಲಿದ್ದು, 1977–78ರ ಕೊನೆಯೊಳಗಾಗಿ ಪೂರ್ಣಗೊಳ್ಳುವುದು. ಈ ವರ್ಷ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲೂ ಗಣನೀಯ ಹಣ ವಿನಿಯೋಗ ಮಾಡಲಾಗುವುದು. ಹಲವು ಮಧ್ಯಮ ನೀರಾವರಿ ಯೋಜನೆಗಳು ಮುಂದುವರಿಯುತ್ತಿದ್ದು, ರಾಜ್ಯದ ಎಲ್ಲ ಕಡೆಗಳಲ್ಲೂ ಹೆಚ್ಚು ಸಂಖ್ಯೆಯಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಕಳೆದ 5 ವರ್ಷಗಳಲ್ಲಿ, ಪ್ರಸ್ತುತ ಆಯಕಟ್ಟಿನ 84,000 ಹೆಕ್ಟೇರು ಭೂಮಿಯನ್ನು ಕೃಷಿಗಾಗಿ ಸಜ್ಜುಗೊಳಿಸಲಾಗಿದ್ದು, 1,50,000 ಹೆಕ್ಟೇರುಗಳಷ್ಟು ಹೊಸ ಪ್ರದೇಶಕ್ಕೂ ಸಣ್ಣ ನೀರಾವರಿ ಯೋಜನೆಗಳ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು.

ರಾಜ್ಯದ 175 ತಾಲೂಕುಗಳಲ್ಲಿ ತಾಲೂಕುವಾರು ಅಂತರ್ಜಲ ಸಮೀಕ್ಷೆಯು ಪೂರ್ತಿಯಾಗಿದೆ. ಪ್ರಸಕ್ತ ವರ್ಷದಲ್ಲಿ ಮಂಜೂರಾದ, ಆದರೆ ಪೂರ್ತಿಯಾಗದಿರುವ 51,500 ನೀರಾವರಿ ಬಾವಿಗಳನ್ನು ಪೂರ್ತಿಮಾಡುವ ವಿಶೇಷ ಕಾರ್ಯವನ್ನು ಕೈಗೊಳ್ಳಲಾಗಿದೆ. ಈಗ ರಾಜ್ಯದಲ್ಲಿ 4.40 ಲಕ್ಷ ನೀರಾವರಿ ಬಾವಿಗಳಿವೆ.

ಈ ವರ್ಷ ತಲೆದೋರಿದ ಅಭಾವ ಪರಿಸ್ಥಿತಿಯಿಂದಾಗಿ ಮಿಶ್ರ ತಳಿ ಜೋಳವನ್ನು ಬಿತ್ತುವುದು ಸಾಧ್ಯವಾಗಲಿಲ್ಲ. ಕೃಷಿ ಇಲಾಖೆಯು ಬೇರೆ ಬೆಳೆಗಳನ್ನು

ಬಿತ್ತುವಂತೆ ರೈತರಿಗೆ ಸಕಾಲದಲ್ಲಿ ಸಲಹೆ ನೀಡಿತು. ಭಾರತ–ಬಲ್ಗೇರಿಯ ತೋಟಗಾರಿಕೆ ಯೋಜನೆಯ ಅಂಗವಾಗಿ ಬೆಂಗಳೂರು ಮತ್ತು ಮಂಗಳೂರು ನಗರಗಳ ಸುತ್ತಮುತ್ತ ಹತ್ತು ಸಾವಿರ ಹೆಕ್ಟೇರು ಭೂಮಿಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.

ಈ ರಾಜ್ಯದಲ್ಲಿ ಜಾರಿಗೆ ಬಂದ ಭೂಸುಧಾರಣಾ ಕಾನೂನಿನ ಮೇರೆಗೆ, ಕೆಲವು ಭೂವರ್ಗಗಳನ್ನುಳಿದು, ಗೇಣಿ ಪದ್ಧತಿಯನ್ನು ರದ್ದುಗೊಳಿಸಲಾಗಿದೆ. 1976ರ ಡಿಸೆಂಬರ್ ಅಂತ್ಯದವರೆಗೆ ಗೇಣಿದಾರರಿಂದ 7,27,113 ಅರ್ಜಿಗಳನ್ನು ಸ್ವೀಕರಿಸಲಾಯಿತು. ಈ ಅರ್ಜಿಗಳು 40 ಲಕ್ಷ ಎಕರೆಗಳಷ್ಟು ವಿಸ್ತಾರವಾದ ಭೂಮಿಗೆ ಸಂಬಂಧಪಟ್ಟಿವೆ. ಇದುವರೆಗೆ, 2,22,000 ಅರ್ಜಿಗಳನ್ನು ಕುರಿತು ತೀರ್ಮಾನ ಮಾಡಲಾಗಿದೆ. ಅವುಗಳಲ್ಲಿ 1,47,473 ಸಂದರ್ಭಗಳಲ್ಲಿ ಗೇಣಿದಾರರಿಗೆ ಅನುಕೂಲವಾಗುವಂತೆ ಸ್ವಾಧೀನದ ಹಕ್ಕನ್ನು ನಿರ್ಧರಿಸಲಾಗಿದೆ. 40,000 ಹೆಕ್ಟೇರುಗಳಷ್ಟು ಭೂಮಿಯನ್ನು ಹೆಚ್ಚುವರಿ ಭೂಮಿಯೆಂದು ಘೋಷಿಸಲಾಗಿದೆ. ಅದರಲ್ಲಿ 9,700 ಹೆಕ್ಟೇರುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಕಾನೂನು ಪ್ರಕಾರ ಅದನ್ನು ಹಂಚಲಾಗುವುದು.

ಪ್ರಾಥಮಿಕ ಕೃಷಿ ಸಹಕಾರ ಸಾಲ ನೀಡಿಕೆ ಸಂಘಗಳನ್ನು ಸ್ವಾವಲಂಬೀ ಘಟಕಗಳಾಗಿ ಮರುಸಂಘಟಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಲಾಗಿದೆ. ಇದುವರೆಗೆ 8,300 ಸಂಘಗಳನ್ನು 3,612 ಸ್ವಾವಲಂಬೀ ಘಟಕಗಳಾಗಿ ಮರು ಸಂಘಟಿಸಲಾಗಿದೆ. ಇನ್ನೂ 600 ಘಟಕಗಳನ್ನು ಹೀಗೆ ಮರುಸಂಘಟಿಸಬೇಕಾಗಿದೆ. 200 ಕೋಟಿ ರೂ.ಗಳ ಸಮಗ್ರ ಗ್ರಾಮೀಣ ಸಾಲ ನೀಡಿಕೆ ಯೋಜನೆಯನ್ನು ರೂಪಿಸಲಾಗಿದೆ. ಒಂದು ನೂರು ರೈತ ಸೇವಾ ಸಂಘಗಳನ್ನು ಮತ್ತು 114 ರೇಷ್ಮೆ ವ್ಯವಸಾಯ ಹಾಗೂ ರೈತ ಸೇವಾ ಸಂಘಗಳನ್ನು ಸ್ಥಾಪಿಸಲಾಗಿದೆ. 1975–76ರ ಅವಧಿಯಲ್ಲಿ ಮತ್ತೊಂದು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಕೊಳ್ಳೇಗಾಲದಲ್ಲಿ ಪ್ರಾರಂಭಿಸಲಾಯಿತು ಮತ್ತು ಈ ಹಣಕಾಸಿನ ವರ್ಷದ ಮುಕ್ತಾಯಕ್ಕೆ ಮುಂಚೆ ರಾಯಬಾಗ್‌ನಲ್ಲಿ ಇನ್ನೊಂದು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವ ಉದ್ದೇಶವಿದೆ. 1977–78ರ ಸಾಲಿನಲ್ಲಿ ದಾವಣಗೆರೆಯಲ್ಲಿ ಮತ್ತೊಂದು ಕಾರ್ಖಾನೆಯನ್ನು ಪ್ರಾರಂಭಿಸಲಾಗುವುದು. 1978–79ರಲ್ಲಿ ಚುಂಚನಕಟ್ಟೆಯಲ್ಲಿಯೂ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲಾಗುವುದು.

ತುಂಗಭದ್ರಾ, ಮಲಪ್ರಭಾ, ಘಟಪ್ರಭಾ ಮತ್ತು ಕಾವೇರಿ ಜಲಾಶಯಗಳ ಆಯಕಟ್ಟಿನ ಪ್ರದೇಶಗಳಲ್ಲಿ ಗ್ರಾಮೀಣ ಅಭಿವೃದ್ಧಿಗೆ ಹಣ ಒದಗಿಸಲು

ಮೂರು ಗ್ರಾಮೀಣ ಬ್ಯಾಂಕುಗಳನ್ನು ತೆರೆಯಲಾಗಿದೆ. ರಾಜ್ಯ ಭೂ ಅಭಿವೃದ್ಧಿ ಬ್ಯಾಂಕು ಇದುವರೆಗೆ 149 ಕೋಟಿ ರೂಪಾಯಿಯಷ್ಟು ಹಣವನ್ನು ಸಾಲವಾಗಿ ನೀಡಿದೆ. ಕಳೆದ ಐದು ವರ್ಷಗಳಲ್ಲಿ 86 ಕೋಟಿ ರೂ.ಗಳಷ್ಟು ಹೆಚ್ಚು ಸಾಲ ನೀಡಲಾಗಿದೆ.

ರಾಜ್ಯದಲ್ಲಿ ಈಗ 106 ಪ್ರಮುಖ ಮಾರುಕಟ್ಟೆಗಳೂ ಮತ್ತು 135 ಉಪ ಮಾರುಕಟ್ಟೆಗಳೂ ಕಾರ್ಯ ಮಾಡುತ್ತಿವೆ. ಇನ್ನೂ ಆರು ಉಪಮಾರುಕಟ್ಟೆಗಳನ್ನು ಸ್ಥಾಪಿಸುವ ಉದ್ದೇಶವಿದೆ. ವಿಶ್ವಬ್ಯಾಂಕ್ ಯೋಜನೆಯ ಮೇರೆಗೆ ಮೊದಲ ಮತ್ತು ಎರಡನೆಯ ಹಂತಗಳಲ್ಲಿ 39 ಮಾರುಕಟ್ಟೆಗಳ ಅಭಿವೃದ್ಧಿ ಕಾರ್ಯವನ್ನು ಕೈಕೊಳ್ಳಲಾಗಿದೆ.

ನಮ್ಮ ಸರ್ಕಾರವು ರಾಜ್ಯದ ಪತ್ತು ಜಿಲ್ಲೆಗಳಲ್ಲಿ ಸಣ್ಣ ರೈತರಿಗಾಗಿ ಭಾರಿ ಪ್ರಮಾಣದಲ್ಲಿ ಪಶುಸಂಪತ್ತು ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾಗಿದೆ. ಕುರಿ ಸಾಕಣೆಗಾಗಿ ಏಳು ಜಿಲ್ಲೆಗಳನ್ನೂ ಕರು ಸಾಕಣೆಗಾಗಿ ಆರು ಜಿಲ್ಲೆಗಳನ್ನೂ ಕೋಳಿ ಸಾಕಣೆಗಾಗಿ ಮೂರು ಜಿಲ್ಲೆಗಳನ್ನೂ ಮತ್ತು ಹಂದಿ ಸಾಕಣೆಗಾಗಿ ಮೂರು ಜಿಲ್ಲೆಗಳನ್ನೂ ಆರಿಸಲಾಗಿದೆ.

ಡೇರಿ ಯೋಜನೆಯು ಯಶಸ್ವಿಯಾಗಿದೆ ಮತ್ತು ಹೆಚ್ಚುವರಿ ಹಾಲು ಸಾಕಷ್ಟಿದ್ದು ಬಳಸುವ ಬಗೆ ಹೇಗೆ ಎಂಬ ಸಮಸ್ಯೆ ಉದ್ಭವಿಸಿದೆ. ಬೆಂಗಳೂರು ಡೇರಿಯನ್ನು ಮತ್ತಷ್ಟು ವಿಸ್ತರಿಸಲಾಗುವುದು ಮತ್ತು ಬರುವ ವರ್ಷ ವಿಜಾಪುರದಲ್ಲಿ ಹೊಸ ಡೇರಿಯೊಂದನ್ನು ಸ್ಥಾಪಿಸಲಾಗುವುದು. ಭಾರೀ ಪ್ರಮಾಣದಲ್ಲಿ ಹಾಲು ಸಂಗ್ರಹವಾಗುವ ಕಾಲಗಳಲ್ಲಿ ಅದನ್ನು ಹೇಗೆ ಉಪಯೋಗಿಸಬೇಕೆಂಬ ಸಮಸ್ಯೆಯನ್ನು ಪರಿಹರಿಸಲು ಹಾಲಿನ ಪುಡಿ ತಯಾರಿಸುವ ಪ್ಲಾಂಟನ್ನು ಸ್ಥಾಪಿಸುವ ಉದ್ದೇಶವಿದೆ.

ವಿದ್ಯುಚ್ಛಕ್ತಿಯ ಬೇಡಿಕೆಯು ಉತ್ಪಾದನೆಗಿಂತ ಹೆಚ್ಚಾಗಿದೆ. ಮುಂಗಾರು ಮಳೆ ಸಾಕಷ್ಟು ಬೀಳದೆ ಲಿಂಗನಮಕ್ಕಿ ಜಲಾಶಯವು ಪರಮಾವಧಿ ಮಟ್ಟವನ್ನು ತಲುಪಲಿಲ್ಲ. ಇದರಿಂದಾಗಿ, ವಿದ್ಯುಚ್ಛಕ್ತಿ ಕಡಿತವನ್ನು ಕ್ರಮವಾಗಿ ಶೇಕಡಾ 50ರ ವರೆಗೂ ಏರಿಸುವುದು ಸರ್ಕಾರಕ್ಕೆ ಅನಿವಾರ್ಯವಾಯಿತು. ಶರಾವತಿ ಯೋಜನೆಯ 9ನೆಯ ಘಟಕವನ್ನು ಪ್ರಾರಂಭಿಸಿದರೂ, ಕೆಲವು ದೋಷಗಳಿಂದಾಗಿ ಅದು ಭಾಗಶಃ ಕಾರ್ಯನಿರ್ವಹಿಸುತ್ತಿದೆ. 10ನೆಯ ಘಟಕವನ್ನು 1977ರ ಮಾರ್ಚಿಯಲ್ಲಿ ಪ್ರಾರಂಭಿಸಲಾಗುವುದು.

ಲಿಂಗನಮಕ್ಕಿ ಅಣೆಕಟ್ಟಿನ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದ ಮೊದಲನೆಯ ಘಟಕವನ್ನು 1978ರ ಜೂನ್‌ನಲ್ಲಿ ಪ್ರಾರಂಭಿಸುವ ನಿರೀಕ್ಷೆ ಇದೆ.

ನಾಗರಝರಿ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದ ಮೊದಲನೆಯ ಘಟಕವನ್ನು 1978ರ ಜೂನ್‌ನಲ್ಲಿ ಪ್ರಾರಂಭಿಸಲಾಗುವುದು.

ಕುದುರೆಮುಖ ಗಣಿ ಯೋಜನೆಗೆ ವಿದ್ಯುತ್ ಪೂರೈಕೆ ಮಾಡುವ ಉದ್ದೇಶದಿಂದ ಪ್ರಾರಂಭಿಸಲಾದ ಚಕ್ರಾಡೈವರ್ಷನ್ ಯೋಜನೆಯು ಮುಂದುವರಿಯುತ್ತಿದೆ. ಇದು ಪೂರ್ಣಗೊಂಡಾಗ 500 ದಶಲಕ್ಷ ಯೂನಿಟ್ಟುಗಳಷ್ಟು ಹೆಚ್ಚಿನ ವಿದ್ಯುತ್ತು ಉತ್ಪಾದನೆಯಾಗುವುದು. ಮುಂದಿನ ವರ್ಷ ವಾರಾಹಿ, ಬೇಡ್ತಿ, ಗೇರುಸೊಪ್ಪೆ ಟೈಲ್‌ರೇಸ್ ಯೋಜನೆಗಳನ್ನೂ ಮತ್ತು ಕಾಳಿ ನದೀ ಎರಡನೇ ಹಂತದ ಯೋಜನೆಯನ್ನೂ ಕೈಕೊಳ್ಳುವ ಉದ್ದೇಶವಿದೆ. ರಾಜ್ಯದಲ್ಲಿ ಕೆಲವು ಗ್ಯಾಸ್ ಟರ್ಬೈನ್ ಘಟಕಗಳನ್ನು ಸ್ಥಾಪಿಸಲೂ ಸಹ ನಾವು ಪ್ರಯತ್ನಿಸುತ್ತಿದ್ದು, ಇದರಿಂದ ಬೆಂಗಳೂರಿನಲ್ಲಿರುವ ಕಾರ್ಖಾನೆಗಳ ಅವಶ್ಯಕತೆಗಳನ್ನು ಕೆಲಮಟ್ಟಿಗೆ ಪೂರೈಸಬಹುದಾಗಿದೆ.

ಕಳೆದ ವರ್ಷ, ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಕೈಗಾರಿಕಾ ಪ್ರಗತಿಯು ನಿರಾತಂಕವಾಗಿ ಸಾಗಿದೆ. ನಮ್ಮ ಸರ್ಕಾರದವರು ರಾಜ್ಯದ ಕೈಗಾರಿಕಾ ಅಭಿವೃದ್ಧಿಗಾಗಿ ಅಗತ್ಯವಾದ ಪೂರ್ವ ಸಿದ್ಧತೆಯ ರೂಪರೇಷೆಯನ್ನು ತಯಾರಿಸಿದ್ದಾರೆ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯು 1975–76ರಲ್ಲಿ 165.38 ಲಕ್ಷ ರೂಪಾಯಿ ನಿವ್ವಳ ಲಾಭವನ್ನು ಗಳಿಸಿದೆ ಮತ್ತು ಅದರ ಫೋರ್ಜ್‌ಪ್ಲಾಂಟ್ ಯೋಜನೆಯು 1977ರ ಅಕ್ಟೋಬರ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಎನ್.ಜಿ.ಇ.ಎಫ್. ಕಾರ್ಖಾನೆಯು 3.60 ಕೋಟಿ ರೂಪಾಯಿಯಷ್ಟು ಭಾರಿ ಲಾಭ ಗಳಿಸಿದೆ. ಭಾರತ ಸರ್ಕಾರದ ಆಡಳಿತಕ್ಕೆ ಸೇರಿದ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ಕಾರ್ಖಾನೆಯು ರೆಮ್ಕೊ ಕಾರ್ಖಾನೆಯ ಆಡಳಿತವನ್ನು ವಹಿಸಿಕೊಂಡಿದ್ದು, ಮುಂದಿನ ಕೆಲವು ವರ್ಷಗಳಲ್ಲಿ ಸಾಕಷ್ಟು ಬಂಡವಾಳ ಹೂಡಿ ಈ ಘಟಕಗಳನ್ನು ಮತ್ತಷ್ಟು ವಿಸ್ತಾರಗೊಳಿಸುವುದಲ್ಲದೆ ನಾನಾ ಪ್ರಕಾರದ ಉತ್ಪಾದನಾಕಾರ್ಯವನ್ನು ಕೈಕೊಳ್ಳಬಹುದೆಂದು ಆಶಿಸಲಾಗಿದೆ. ಹಟ್ಟಿ ಚಿನ್ನದ ಗಣಿ ಕಂಪನಿ ಲಿಮಿಟೆಡ್ ಸಂಸ್ಥೆಗೆ ಚಿನ್ನದ ಸಂಗ್ರಹಗಳನ್ನು ವಿಲೆ ಮಾಡುವಲ್ಲಿ ತೊಂದರೆಯುಂಟಾಗಿದೆ. ಆದ್ದರಿಂದ ಪರಸ್ಪರ ಒಪ್ಪಂದದ ಆಧಾರದ ಮೇಲೆ ಕಂಪನಿಯ ಇಡೀ ಉತ್ಪಾದನೆಯನ್ನು ಭಾರತ ಸರ್ಕಾರವೇ ತೆಗೆದುಕೊಳ್ಳುವ ಏರ್ಪಾಡು ಮಾಡಲು ಪ್ರಯತ್ನ ನಡೆದಿದೆ. ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಕಾರ್ಪೊರೇಷನ್ನು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳನ್ನು ಅಭಿವೃದ್ಧಿ ಪಡಿಸಲು ನೆರವು ನೀಡುತ್ತಿದೆ. ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆಯನ್ನು ಪ್ರೋತ್ಸಾಹಿಸಲು ಮತ್ತು ಅಭಿವೃದ್ಧಿ ಪಡಿಸಲು ಒಂದು ಹೊಸ ಕಾರ್ಪೊರೇಷನ್ನನ್ನು ಸ್ಥಾಪಿಸಲಾಗಿದೆ. ನಾವು ಕರ್ನಾಟಕ

ಹಡಗು ಕಾರ್ಪೊರೇಷನ್ನನ್ನೂ ಸ್ಥಾಪಿಸಿದ್ದೇವೆ. ಈ ಕಾರ್ಪೊರೇಷನು ಒಟ್ಟು 42,000 ಡಿಡಬ್ಲ್ಯೂಟಿ ಟನ್ನು ತೂಕದ ಎರಡು ಹಡಗುಗಳನ್ನು ಖರೀದಿ ಮಾಡಿದೆ.

ದೊಡ್ಡ ಕೈಗಾರಿಕೆಗಳೊಂದಿಗೆ ಸಣ್ಣ ಕೈಗಾರಿಕೆಗಳನ್ನೂ ಸಹ ಅಭಿವೃದ್ಧಿ ಪಡಿಸುವುದು ನಮ್ಮ ಸರ್ಕಾರದ ಮುಖ್ಯ ಪ್ರಯತ್ನಗಳಲ್ಲೊಂದಾಗಿದೆ.

ರಾಜ್ಯ ಕರಕುಶಲ ಕೈಗಾರಿಕಾಭಿವೃದ್ಧಿ ಕಾರ್ಪೊರೇಷನ್ನಿನ ಪ್ರಸಕ್ತ ವರ್ಷವು ಮುಗಿಯುವ ಮೊದಲೇ ಒಂದು ಕೋಟಿ ರೂಪಾಯಿಯಷ್ಟು ಭಾರಿ ವ್ಯವಹಾರವನ್ನು ಕುದುರಿಸುವ ನಿರೀಕ್ಷೆಯಿದೆ. ಕೈಗಾರಿಕೆಗಳ ಬೆಳವಣಿಗೆಗೆ ಯೋಗ್ಯವಾದ ಸ್ಥಳಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗುತ್ತಿದೆ. ಕೈಮಗ್ಗದ ನೇಕಾರರಿಗೆ ಪ್ರೋತ್ಸಾಹ ನೀಡಲು ಮತ್ತು ಅವರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಕೈಮಗ್ಗ ಅಭಿವೃದ್ಧಿ ಕಾರ್ಪೊರೇಷನ್ನನ್ನು ರಚಿಸಲಾಗಿದೆ. ಈ ಕಾರ್ಪೊರೇಷನ್ನು ರಬಕವಿ—ಬನಹಟ್ಟಿ, ಇಳಕಲ್ಲಂ, ರಾಮದುರ್ಗ ಮತ್ತು ರಾಣೆಬೆನ್ನೂರು ಮುಂತಾದ ಸ್ಥಳಗಳಲ್ಲಿ ಕೈಮಗ್ಗದ ತೀವ್ರ ಯೋಜನೆಗಳನ್ನು ಈಗಾಗಲೇ ಕಾರ್ಯರೂಪಕ್ಕೆ ತಂದಿದೆ.

ದೇಶದ ಉಪ್ಪುನೇರಳೆ ಕಚ್ಚಾ ರೇಷ್ಮೆಯ ಪೈಕಿ ಶೇಕಡಾ 85 ರಷ್ಟು ಕರ್ನಾಟಕದಲ್ಲಿಯೇ ಉತ್ಪನ್ನವಾಗುತ್ತದೆ. ಒಂದು ಲಕ್ಷ ಹೆಕ್ಟೇರು ವಿಸ್ತೀರ್ಣ ಭೂಮಿಯಲ್ಲಿ ಉಪ್ಪುನೇರಳೆ ಕೃಷಿ ನಡೆಯುತ್ತಿದೆ. ಈಗ 2,100 ಟನ್ನುಗಳಷ್ಟು ರೇಷ್ಮೆ ಉತ್ಪಾದನೆ ಮಾಡುವ ರೇಷ್ಮೆ ವ್ಯವಸಾಯ ಮತ್ತು ರೇಷ್ಮೆ ಉದ್ಯಮವು 25 ಲಕ್ಷ ರೈತರಿಗೆ ಜೀವನೋಪಾಯ ಕಲ್ಪಿಸಿದೆ. ಈಗಿರುವ ರೇಷ್ಮೆಯ ಉತ್ಪಾದನೆಯನ್ನು ಎರಡು ಪಟ್ಟು ಹೆಚ್ಚಿಸುವ ಮೂಲಕ ಐದು ವರ್ಷಗಳ ಕಾಲದಲ್ಲಿ ರೇಷ್ಮೆ ವ್ಯವಸಾಯ ಉದ್ಯಮದಲ್ಲಿ 50 ಲಕ್ಷ ರೈತರಿಗೆ ಜೀವನೋಪಾಯ ಕಲ್ಪಿಸುವ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಭಾರತ ಸರ್ಕಾರವು 70 ಕೋಟಿ ರೂಪಾಯಿ ಮಂಜೂರು ಮಾಡಿದೆ.

ಜೀವಿ ಪರಿಸರ ಸಮತೋಲನವನ್ನೂ ಕೈಗಾರಿಕಾ ಪ್ರಗತಿಯನ್ನೂ ಗಮನಿಸಿ ನಮ್ಮ ಅರಣ್ಯಸಂಪತ್ತನ್ನು ಅಭಿವೃದ್ಧಿ ಪಡಿಸುವುದೂ ಸೂಕ್ತವಾಗಿ ಬಳಸಿಕೊಳ್ಳುವುದೂ ಅವಶ್ಯಕವಾಗಿದೆ. ಅರಣ್ಯ ಬೆಳೆಸುವ ಮತ್ತು ಪುನಃ ಬೆಳೆಸುವ ಎರಡೂ ಯೋಜನೆಗಳನ್ನೂ 30,000 ಹೆಕ್ಟೇರುಗಳಿಗೆ ವಿಸ್ತರಿಸಲಾಗಿದೆ. ಇದು 1975–76 ರಲ್ಲಿ ಇದ್ದುದಕ್ಕಿಂತ 8,000 ಹೆಕ್ಟೇರುಗಳಷ್ಟು ಹೆಚ್ಚಾಗಿದೆ. ರಾಜ್ಯದಲ್ಲಿ ಮರ ಕಡಿಯುವುದನ್ನು ಕಾನೂನಿನ ಮೂಲಕ ನಿಯಂತ್ರಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಮತ್ತು ವ್ಯಾಪಾರ ಬೇಕಾದರೆ ಬೆಳೆಯಲು ಉತ್ತಮ ರಸ್ತೆಗಳ ನಿರ್ಮಾಣ ಅವಶ್ಯಕವಾಗಿದೆ. ಲೋಕೋಪಯೋಗಿ ಇಲಾಖೆಯು

61,657 ಕಿಲೋಮೀಟರಂಗಳಷ್ಟು ರಸ್ತೆಯನ್ನು ಒದಗಿಸಿದೆ. ರಾಜ್ಯದಲ್ಲಿ ಪ್ರತಿ 100 ಚದರ ಕಿಲೋಮೀಟರು ಪ್ರದೇಶಕ್ಕೆ 47 ಕಿಲೋಮೀಟರು ರಸ್ತೆ ಸೌಕರ್ಯ ದೊರೆತಿದೆ. ಕುದುರೆಮುಖ—ಮಂಗಳೂರು ರಸ್ತೆ ಕಾಮಗಾರಿಯನ್ನು ಆದ್ಯತಾ ಕ್ರಮದಲ್ಲಿ ಕೈಗೊಳ್ಳಲಾಗಿದ್ದು, ಅದು ಈ ತಿಂಗಳ ಕೊನೆಯ ವೇಳೆಗೆ ಪೂರ್ತಿಗೊಳ್ಳುವ ನಿರೀಕ್ಷೆಯಿದೆ.

ಮಾರ್ಚ್ 1972ರಲ್ಲಿ ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದಾಗ ರಾಜ್ಯದಲ್ಲಿ ರಿಜಿಸ್ಟರ್ ಆದ ಮೋಟಾರು ವಾಹನಗಳ ಸಂಖ್ಯೆ 1.38 ಲಕ್ಷ. ಇಂದು ವಾಹನಗಳ ಸಂಖ್ಯೆ 2.42 ಲಕ್ಷಕ್ಕೂ ಹೆಚ್ಚಾಗಿದೆ. ರಾಜ್ಯಕ್ಕೆ 400 ರಾಷ್ಟ್ರೀಯ ಪರ್ಮಿಟ್ಟುಗಳನ್ನು ಪಡೆಯಲಾಗಿದ್ದು, ಇವುಗಳಲ್ಲಿ 236 ಪರ್ಮಿಟ್ಟುಗಳನ್ನು ಈಗಾಗಲೇ ನೀಡಲಾಗಿದೆ. ಕರ್ನಾಟಕ ರಸ್ತೆಸಾರಿಗೆ ಕಾರ್ಪೊರೇಷನ್ ಈಗ 4,393 ಬಸ್ಸುಗಳನ್ನು ಹೊಂದಿದೆ. ಅಲ್ಲದೆ ಸಂಸ್ಥೆಯು ಬಂಡವಾಳವೂ 50 ಕೋಟಿ ರೂಪಾಯಿಗಿಂತ ಹೆಚ್ಚಾಗಿದೆ. ಈ ವರ್ಷ 65 ಕೋಟಿ ರೂಪಾಯಿ ಆದಾಯ ಬರುವ ನಿರೀಕ್ಷೆಯಿದೆ.

ಕೈಗಾರಿಕಾ ಕ್ಷೇತ್ರದಲ್ಲಿ ವರ್ಷವಿಡೀ ಸಂಪೂರ್ಣ ಶಾಂತ ವಾತಾವರಣವಿದ್ದುದು ಸಂತೋಷದ ಸಂಗತಿಯೇ ಸರಿ. ಒಟ್ಟಿನಲ್ಲಿ ಕಾರ್ಮಿಕ ಮತ್ತು ಆಡಳಿತ ವರ್ಗದ ನಡುವಣ ಬಾಂಧವ್ಯವು ಹಾರ್ದಿಕವಾಗಿತ್ತೆಂದು ಹೇಳಬಹುದು.

ನಮ್ಮ ಸರ್ಕಾರವು ತನ್ನ ನೌಕರರ ವಿಚಾರದಲ್ಲಿ ಯಾವಾಗಲೂ ಸಹಾನುಭೂತಿಯಿಂದಲೇ ವರ್ತಿಸಿದೆ. ವೇತನ ಆಯೋಗದ ಶಿಫಾರಸುಗಳನ್ನು ಒಪ್ಪಿಕೊಂಡು, ಆ ತೀರ್ಮಾನವನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದರಿಂದಾಗಿ ಇಂದು ಇಡೀ ರಾಷ್ಟ್ರದಲ್ಲಿ ನಮ್ಮ ಸರ್ಕಾರಿ ನೌಕರರೇ ಉತ್ತಮ ವೇತನ ಸೌಲಭ್ಯ ಪಡೆಯುವವರಾಗಿದ್ದಾರೆಂದು ಹೇಳಬಹುದು. ಅಲ್ಲದೆ ಸರ್ಕಾರಿ ನೌಕರರಿಗೆ ಆಹಾರ ಧಾನ್ಯಗಳನ್ನು ಕೊಳ್ಳಲು ಉದಾರ ಮುಂಗಡಗಳನ್ನು ಕೊಡಲಾಗಿದೆ. ಸರ್ಕಾರಿ ನೌಕರರಿಗೆ ಮನೆಗಳನ್ನು ಒದಗಿಸುವುದು ಒಂದು ಮುಖ್ಯ ಸಮಸ್ಯೆಯಾಗಿದೆ. ರಾಜ್ಯದಲ್ಲಿ ಈ ವರೆಗೆ ಶೇಕಡಾ 58ರಷ್ಟು ಖಾಯಂ ಪೋಲೀಸು ಸಿಬ್ಬಂದಿಗೆ ಮನೆಗಳನ್ನು ಒದಗಿಸಲಾಗಿದೆ.

1977-78ರ ಸಾಲಿನ ವಾರ್ಷಿಕ ಯೋಜನೆಯನ್ನು ಬಜೆಟ್ ಅಂದಾಜುಗಳ ಜೊತೆಗೆ ಮಂಡಿಸಲಾಗುವುದು. ಈ ಹಿಂದಿನ ಅಧಿವೇಶನದಲ್ಲಿ ಕೆಲವು ವಿಧೇಯಕಗಳನ್ನು ಮಂಡಿಸಲಾಗಿತ್ತು. ಅವುಗಳನ್ನು ಆಗ ಪರ್ಯಾಲೋಚಿಸಲಾಗಲಿಲ್ಲ.

ಆವಿಧೇಯಕಗಳನ್ನು ಮತ್ತು ಈ ಅವಧಿಯಲ್ಲಿ ಹೊರಡಿಸಲಾಗಿರುವ ಕೆಲವು ಅಧ್ಯಾದೇಶಗಳ ಬದಲಾಗಿ ವಿಧೇಯಕಗಳನ್ನು ಈಗ ನಿಮ್ಮ ಮುಂದೆ ಮಂಡಿಸಲಾಗುವುದು.

ಮುಂಬರುವ ವರ್ಷದಲ್ಲಿ ರಾಜ್ಯದ ಜನತೆಗೆ ಇನ್ನೂ ಹೆಚ್ಚಿನ ಸಾಮಾಜಿಕ ಮತ್ತು ಆರ್ಥಿಕ ಕ್ಷೇಮವನ್ನು ಪ್ರಾಮಾಣಿಕವಾಗಿಯೂ ಸಮರ್ಪಣಾಭಾವದಿಂದಲೂ ಒದಗಿಸಲು ಮತ್ತು ಅವರ ಉನ್ನತ ಆಶೋತ್ತರಗಳನ್ನು ಈಡೇರಿಸಲು ನೀವು ನಿಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸುವಿರಾಗಿ ನಂಬಿದ್ದೇನೆ.

ನಿಮ್ಮ ಈ ಪ್ರಯತ್ನಕ್ಕೆ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ,

" ಜೈ ಹಿಂದ್ "